ಸ್ಥಾಪನೆ : ೧೯೧೫

# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೭೩೮೬೭
http://www.kasapa.in e-mail : kannadaparishattu@gmail.com


ಕ್ರಮಸಂಖ್ಯೆ: ಕಸಾಪ/ಗ.ಯಂ.ವಿ./ಗ.ಖರೀದಿ/೨೦೨೧-೨೨ ದಿನಾಂಕ: ೦೪-೦೨-೨೦೨೨

## ಪ್ರಕಟಣೆ

### ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿ ಉಪಯೋಗಕ್ಕಾಗಿ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಉತ್ತಮ ಗುಣಮಟ್ಟದ ಆಧುನಿಕ ಗಣಕಯಂತ್ರಗಳು ಹಾಗೂ ಪ್ರಿಂಟರ್‌ಗಳನ್ನು ಸರಬರಾಜು ಮಾಡಲು ದರಪಟ್ಟಿ ಆಹ್ವಾನ

ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದ ಜೊತೆಗೆ ಕನ್ನಡ – ಕನ್ನಡಿಗ – ಕರ್ನಾಟಕ ಇವುಗಳ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಹಾಗೂ ಎಲ್ಲ ಕನ್ನಡ ಸಂಘ-ಸಂಸ್ಥೆಗಳ ಮಾತೃ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು.

ಪುಸ್ತಕ ಪ್ರಕಟಣೆ ಮತ್ತು ಮಾರಾಟ, ಸಾಹಿತ್ಯ ಸಮ್ಮೇಳನಗಳು ಮತ್ತು ರಾಜ್ಯ, ರಾಷ್ಟ್ರಮಟ್ಟದ ಸಮಾವೇಶಗಳ ಆಯೋಜನೆ, ದತ್ತಿ ಪ್ರಶಸ್ತಿಗಳು, ಸಾಹಿತ್ಯಿಕ ಕಾರ್ಯಕ್ರಮಗಳು ಹಾಗೂ ಸಾಹಿತ್ಯ ಪರೀಕ್ಷೆಗಳನ್ನು ನಡೆಸುವುದೂ ಸೇರಿದಂತೆ ಮೇಲ್ಕಾಣಿಸಿದ ಧ್ಯೇಯೋದ್ದೇಶಗಳನ್ನು ಈಡೇರಿಸುವ ನಿಟ್ಟಿನಲ್ಲಿ ಪರಿಷತ್ತು ಕಾರ್ಯನಿರ್ವಹಿಸುತ್ತಿದೆ. ಜೊತೆಗೆ ಐದು ವರ್ಷಗಳ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಕನಿಷ್ಠ ಒಂದು ಕೋಟಿ ಸದಸ್ಯತ್ವ ನೋಂದಣಿಯ ಗುರಿಯನ್ನು ಹೊಂದಲಾಗಿದೆ. ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಜನಸಾಮಾನ್ಯರಿಗೂ ಪರಿಷತ್ತನ್ನು ತಲುಪುವಂತಹ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಎಲ್ಲ ಕಾರ್ಯಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತ ಕಚೇರಿಗೆ **ಅತ್ಯಾಧುನಿಕ ತಂತ್ರಜ್ಞಾನವುಳ್ಳ, ಉತ್ತಮ ಗುಣಮಟ್ಟದ ಆಧುನಿಕ ಗಣಕಯಂತ್ರಗಳು ಹಾಗೂ ಪ್ರಿಂಟರ್‌ಗಳ** ಅವಶ್ಯಕತೆ ಇದೆ. ಈ ಸಂಬಂಧ ಗಣಯಕಯಂತ್ರಗಳನ್ನು ಹಾಗೂ ಪ್ರಿಂಟರ್‌ಗಳನ್ನು ಸರಬರಾಜು ಮಾಡಲು **ಪರಿಣಿತವುಳ್ಳ ಕನಿಷ್ಠ ಐದು ವರ್ಷಗಳ ಅನುಭವವುಳ್ಳ ಸಂಸ್ಥೆ / ವ್ಯಕ್ತಿಗಳಿಂದ ದರಪಟ್ಟಿ** (Quotation) ಕರೆಯಲಾಗಿದೆ.

**ಸರಬರಾಜು ಮಾಡಬೇಕಾದ ಗಣಕಯಂತ್ರಗಳ ಹಾಗೂ ಪ್ರಿಂಟರ್‌ಗಳ ಸಂರಚನೆ (Configuration) ವಿವರಗಳು ಈ ಕೆಳಕಂಡಂತಿವೆ**

**೧) ಮಾನ್ಯ ಅಧ್ಯಕ್ಷರ ಕೊಠಡಿಗೆ :**

| ಗಣಕಯಂತ್ರದ ವಿವರ : | ಪ್ರಿಂಟರ್ ವಿವರ : |
|---|---|
| All-in-one PC with Core - i7 10th Gen<br>16 GB Ram, 512 GB SSD, 1TB HDD<br>MS Window Pro, 27 inches Display<br>With 3 Years Warranty + 4 TB External Drive | Epson Inktank Color Printer<br>All in one Printer with Wifi<br>and Lan Connection |

**೨) ಮಾನ್ಯ ಅಧ್ಯಕ್ಷರ ಆಪ್ತಶಾಖೆಗೆ :**

| | |
|---|---|
| All-in-one PC with Core - i5 10th Gen<br>16 GB Ram, 256 GB SSD, 1 TB HDD<br>MS Window Pro, 27 inches Display<br>With 3 Years Warranty | HP Laserjet Pro<br>Duplex<br>All in One Printer, Heavy duty<br>with Wifi and Lan Connection |

೨ನೇ ಪುಟಕ್ಕೆ .....

Scanned with Oken Scanner

೩) ಆಡಳಿತ ಕಚೇರಿಯ ವಿಭಾಗಗಳಿಗೆ :

| ಗಣಕಯಂತ್ರದ ವಿವರ : | ಪ್ರಿಂಟರ್ ವಿವರ : |
|---|---|
| All-in-one PC with Core - i5 10th Gen<br>8 GB Ram, 1TB HDD<br>MS Window Pro, 22 inches Display<br>With 3 Years Warranty | HP Laserjet Pro<br>Duplex<br>All in One Printer with<br>Wifi and Lan Connection |

ಗಣಕಯಂತ್ರಗಳನ್ನು ಹಾಗೂ ಪ್ರಿಂಟರ್‌ಗಳನ್ನು ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ ಸಾರ್ವಜನಿಕ ಹೊಣೆಗಾರಿಕೆ ನಿರ್ವಹಣೆ(ಸಿ.ಎಸ್.ಆರ್.) ಅಡಿಯಲ್ಲಿ ಖರೀದಿಸಲಾಗುತ್ತಿದ್ದು, ಈ ಮೊತ್ತವನ್ನು ಬ್ಯಾಂಕ್‌ವತಿಯಿಂದ ಪಾವತಿಸುವುದರಿಂದ ಸರಬರಾಜು ಬಿಲ್ಲನ್ನು ಬ್ಯಾಂಕಿನ ಹೆಸರಿನಲ್ಲಿ ನೀಡುವುದು.

ಆಸಕ್ತ ಅರ್ಜಿದಾರರು **ದಿನಾಂಕ** ೧೧–೦೨–೨೦೨೦ **ರಳೊಳಗಾಗಿ** ಖುದ್ದಾಗಿ ಅಥವಾ ಅಂಚೆಯ ಮೂಲಕ ತಮ್ಮ / ಸಂಸ್ಥೆಯ ಹಿನ್ನೆಲೆಯುಳ್ಳ ಪರಿಚಯ ಪತ್ರ, ಪರಿಣಿತಿ ಮತ್ತು ಅನುಭವಗಳ ದೃಢೀಕೃತ ದಾಖಲೆ ಪ್ರತಿಗಳನ್ನು, ಜಿಎಸ್‌ಟಿ ಸಂಖ್ಯೆಯೊಂದಿಗೆ ದರಪಟ್ಟಿಯನ್ನು **ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೫೬೦೦೧೮.** ಈ ವಿಳಾಸಕ್ಕೆ ಕಳುಹಿಸುವುದು.

(ನೇ. ಭ. ರಾಮಲಿಂಗಶೆಟ್ಟಿ)
ಗೌರವ ಕಾರ್ಯದರ್ಶಿಗಳು
8.2.22

ಪ್ರತಿ : ೧. ಸೂಚನಾ ಫಲಕಕ್ಕೆ
೨. ಪರಿಷತ್ತಿನ ಜಾಲತಾಣಕ್ಕೆ – www.kasapa.in
೨. ಕಡತ